ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

18ನೇ ಜೂನ್ 2014

ಮಾನ್ಯ ಶ್ರೀ ಸಿದ್ದರಾಮಯ್ಯನವರೇ,

ಪ್ರಸಕ್ತ ಬೆಂಗಳೂರಿನಲ್ಲಿ ಅಸಮರ್ಪಕ ಕಸ ಮತ್ತು ತ್ಯಾಜ್ಯ ನಿರ್ವಹಣೆಯಿಂದ ಉಲ್ಬಣಿಸಿರುವ ಬಿಕ್ಕಟ್ಟು ಮತ್ತು ಅದರಿಂದ ಉಂಟಾಗುತ್ತಿರುವ ತೊಂದರೆಗಳ ಕುರಿತಾಗಿ ತಮ್ಮ ಕಾಳಜಿಗಳನ್ನು ವ್ಯಕ್ತಪಡಿಸಿ ಅನೇಕ ನಾಗರಿಕರು ಮತ್ತು ವಿವಿಧ ನಿವಾಸಿ ಕಲ್ಯಾಣ ಸಂಘಗಳು ನನಗೆ ಅಹವಾಲುಗಳನ್ನು ಸಲ್ಲಿಸುತ್ತಿದ್ದಾರೆ.

ವೈಯಕ್ತಿಕ ನೆಲೆಯಲ್ಲಿ, ಬೆಂಗಳೂರಿನ ಒಬ್ಬ ನಾಗರಿಕನಾಗಿ ಮತ್ತು ನಾಗರಿಕರ ಪರವಾಗಿ ನಗರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯನಾಗಿ, ಈ ಸಮಸ್ಯೆಯನ್ನು ಸರ್ಕಾರ ನಿರ್ವಹಿಸುತ್ತಿರುವ ರೀತಿಯಿಂದ, ನನ್ನ ತೀವ್ರ ನಿರಾಶೆ ಮತ್ತು ಆಕ್ರೋಶಗಳನ್ನು ತಮ್ಮಲ್ಲಿ ನಿವೇದಿಸಿಕೊಳ್ಳಲು ಈ ಪತ್ರವನ್ನು ಬರೆಯುತ್ತಿದ್ದೇನೆ.

ಸ್ಥೂಲವಾಗಿ ಹೇಳಬೇಕೆಂದರೆ, ಅವ್ಯವಸ್ಥೆಯ ಆಗರವಾಗಿರುವ ನಗರಾಡಳಿತ, ಈ ತ್ಯಾಜ್ಯ ನಿರ್ವಹಣೆಯ ಬಿಕ್ಕಟ್ಟನ್ನು ನಿರ್ವಹಿಸುವಲ್ಲಿ ಸೋತಿದೆ - ತಾವು ಜನರಿಗೆ ನೀಡಿದ ಉತ್ತಮ ಆಡಳಿತದ ವಾಗ್ದಾನದ ಹಿನ್ನಲೆಯಲ್ಲಿ ಇದು ಪ್ರಮುಖ ವಿಷಯವಾಗಿದೆ. ಇವತ್ತು ನಗರಾಡಳಿತದಲ್ಲಿರುವ ಮಿತಿಮೀರಿದ ಭಷ್ಟಾಚಾರ, ಪಾರದರ್ಶಕತೆಯ ಕೊರತೆ, ದೋಷಯುಕ್ತ ಗುತ್ತಿಗೆ ವ್ಯವಸ್ಥೆ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವಗಳಿಂದ ಸಹಜವಾಗಿಯೇ ನಾಗರಿಕರು ಆಕ್ರೋಶಗೊಂಡಿದ್ದಾರೆ.

ಬೆಂಗಳೂರು ಇಂದು ಎದುರಿಸುತ್ತಿರುವ ಸಮಸ್ಯೆಗಳಿಗೆ ಮತ್ತು, ನಿರ್ದಿಷ್ಟವಾಗಿ ತ್ಯಾಜ್ಯ ನಿರ್ವಹಣೆಯ ಸಮಸ್ಯೆಗಳಿಗೆ ನಗರದ ರಚನೆ, ಗಾತ್ರಗಳಿಗಿಂತಲೂ ಹೆಚ್ಚಾಗಿ, ಮೂಲಭೂತವಾಗಿ ಯೋಜನಾಬದ್ಧವಾಗಿ ಕಾರ್ಯನಿರ್ವಹಿಸದಿರುವುದರ ಜೊತೆಗೆ ಸಾರ್ವಜನಿಕ ಸೇವೆಗಳನ್ನು ನೀಡಬೇಕಾದ ಸರ್ಕಾರಿ ಸಂಸ್ಥೆಗಳ ಅಸಮರ್ಪಕ ನಿರ್ವಹಣೆಯೇ ಕಾರಣವಾಗಿದೆ. ಇನ್ನಿತರ ಪ್ರಚಲಿತ ಸಮಸ್ಯೆಗಳ ಜೊತೆಗೆ ತ್ಯಾಜ್ಯ ಸಮಸ್ಯೆಯೂ ಕೂಡ ನಗರದ ಯೋಜನಾರಹಿತ ಬೆಳವಣಿಗೆಗೆ ಆಸ್ಪದ ನೀಡಿದ್ದಕ್ಕೆ ಸಾಕ್ಷಿಯಾಗಿದೆ. ಇದರ ಪರಿಣಾಮವಾಗಿ ಸಾರ್ವಜನಿಕರ ಸ್ವಾಸ್ಥ್ಯದ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳ ಕುರಿತು ಇನ್ನೂ ಯಾರು ಹೆಚ್ಚು ಮಾತನಾಡುತ್ತಿಲ್ಲ.

ನಮ್ಮ ಬೆಂಗಳೂರು ನಗರಕ್ಕೆ ಈಗ ತುರ್ತಾಗಿ ಬೇಕಿರುವುದು ಆಡಳಿತ ಸುಧಾರಣಾ ಕ್ರಮಗಳು ಮತ್ತು ಅದರ ಅಭಿವೃದ್ಧಿಗೆ ಯೋಜನಾಬದ್ಧ ವಿಧಾನಗಳನ್ನು ಅಳವಡಿಕೊಳ್ಳುವುದು. 2010ರಲ್ಲಿ, ಸುಮಾರು 40,000ಕ್ಕೂ

..2..

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ. ಅಂಬಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

ಅಧಿಕ ನಾಗರಿಕರೊಡನೆ ಅನೇಕ ಸಭೆ-ಸಮಾಲೋಚನೆಗಳನ್ನು ನಡೆಸಿ ಸಿದ್ಧಪಡಿಸಲಾದ "ಪ್ಲಾನ್ ಬೆಂಗಳೂರು-2020" (ಪಿಬಿ-2020) ಅನ್ನು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಭವಿಷ್ಯದ ಬೆಂಗಳೂರಿನ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು, ಸದ್ಯ ನಗರವನ್ನು ಕಾಡುತ್ತಿರುವ ತ್ಯಾಜ್ಯ ನಿರ್ವಹಣೆಯೂ ಸೇರಿದಂತೆ ಇಲ್ಲಿನ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಸಮಗ್ರ ಸಂಯೋಜಿತ ಪ್ರದೇಶಾವಾರು ಯೋಜನೆಗಳನ್ನು ಅಳವಡಿಸಿಕೊಳ್ಳಲು ಪಿಬಿ-2020 ಬಯಸಿತ್ತು.

ಸಮಗ್ರ ಸಮರ್ಪಕ ಯೋಜನೆಗಳಿಗೆ ಒತ್ತುಕೊಟ್ಟಿದ್ದ ಪಿಬಿ-2020, ನಗರದ ಮತ್ತು ನಾಗರಿಕರ ಸಮಸ್ಯೆಗಳಿಗೆ ತಾತ್ಕಾಲಿಕ ಪರಿಹಾರ ಮಾರ್ಗಗಳಿಂದ ಉಂಟಾಗುವ ದುಂದುವೆಚ್ಚ ಮತ್ತು ಅಪಾಯಗಳ ಕುರಿತು ಪ್ರಮುಖವಾಗಿ ಪ್ರಸ್ತಾಪಿಸಿತ್ತು. ಜೊತೆಗೆ, ಸಮಸ್ಯೆಗಳನ್ನು ಶೀಘ್ರದಲ್ಲಿ ಪರಿಹರಿಸದಿದ್ದರೆ ಮುಂದಿನ ದಿನಗಳನ್ನು ಅದರ ಪರಿಹಾರ ಮಾರ್ಗಗಳು ಹೇಗೆ ಮತ್ತಷ್ಟು ಕಠಿಣವಾಗುತ್ತವೆ ಮತ್ತು ಅಧಿಕ ವೆಚ್ಚದ್ದಾಗುತ್ತವೆ ಎಂದು ಕೂಡ ಎಚ್ಚರಿಸಿತ್ತು. ಪ್ರಸಕ್ತ ಎದುರಾಗಿರುವ ತ್ಯಾಜ್ಯ ನಿರ್ವಹಣೆಯ ಬಿಕ್ಕಟ್ಟಿನ ಬಗ್ಗೆ ಪಿಬಿ-2020 ಅಂದು ನುಡಿದ ಭವಿಷ್ಯವಾಣಿ ನಿಜವಾಗಿದೆ. ಯಾವುದೇ ಕ್ರಮಕ್ಕೆಗೊಳ್ಳದೇ, ಈ '"ಪ್ಲಾನ್ ಬೆಂಗಳೂರು-2020" ದಸ್ತಾವೇಜು, ಅನೇಕ ತಿಂಗಳುಗಳಿಂದಲೂ ನಗರಾಭಿವೃದ್ಧಿ ಇಲಾಖೆಯ ಬಳಿಯೇ ಇದೆ.

ಪ್ರಸ್ತುತ ಸಮಸ್ಯೆಗಳನ್ನೆದುರಿಸಲು, ಎರಡು ಹಂತಗಳಲ್ಲಿ, ತಾವು ಈ ಕೂಡಲೇ ಕಾರ್ಯಪ್ರವೃತ್ತರಾಗಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇನೆ. ಮೊದಲನೆಯದಾಗಿ, ಮೆಟ್ರೋಪಾಲಿಟನ್ ಪಾಲಿಸಿ ಕಮಿಟಿಯ (ಎಂಪಿಸಿ) ಪುನಾರಚನೆಯ ಜೊತೆಜೊತೆಗೆ ಬೆಂಗಳೂರು ನಗರದ ಮತ್ತಷ್ಟು ಅವಮಾನ ಮತ್ತು ದುರಂತಗಳನ್ನು ತಡೆಯಲು ತಕ್ಷಣದ ಪರಿಹಾರ ಕ್ರಮವಾಗಿ ತ್ಯಾಜ್ಯ ವಿಸರ್ಜನೆಗೆ ಪರ್ಯಾಯ ಸ್ಥಳವನ್ನು ನಿಗದಿಮಾಡಬೇಕು. ಎರಡನೆಯದಾಗಿ, ಪುನಾರಚಿತ ಎಂಪಿಸಿಯ ಮುಲಕ ನಗರಕ್ಕಾಗಿ ಧೀರ್ಘಕಾಲೀನ ಶಾಸನಬದ್ಧ ಸಮಗ್ರ ಯೋಜನೆ ಮತ್ತು ಸುಧಾರಣೆಗಳನ್ನು ಜಾರಿಗೊಳಿಸುವುದು.

ನಗರಾಡಳಿತವು ಪ್ರಸಕ್ತ ನಮ್ಮ ನಗರವನ್ನು ನಿರ್ವಹಿಸುತ್ತಿರುವ ರೀತಿಯಿಂದ ನಾಗರಿಕರು ಹತಾಶೆಗೊಂಡಿದ್ದಾರೆ ಮತ್ತು ತೀವ್ರ ಆಕ್ರೋಶಭರಿತರಾಗಿದ್ದಾರೆಯೆಂಬುದನ್ನು ಸರ್ಕಾರ ತಿಳಿದುಕೊಳ್ಳಬೇಕು. ಸರ್ಕಾರ ಮತ್ತು ಜನಪ್ರತಿನಿಧಿಗಳು ಬೇಗನೆ ಜವಾಬ್ದಾರಿಯುತವಾಗಿ ವರ್ತಿಸದಿದ್ದಲ್ಲಿ, ಇತ್ತೀಚೆಗೆ ಬೇರೆಡೆಗಳಲ್ಲಿ ಕಂಡಂತೆ ಇಲ್ಲಿಯೂ ಕೂಡ ನಾಗರಿಕರು ವ್ಯವಸ್ಥೆಯ ವಿರುದ್ಧ ಬೀದಿಗಿಳಿದು ಪ್ರತಿಭಟಿಸುವ ಸಕ್ರಿಯ ಚಳುವಳಿಗಳನ್ನು ತಾವು ನಿರೀಕ್ಷಿಸಬಹುದು.

ಈಗ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ನಮ್ಮ ನಗರದ ಮರುನಿರ್ಮಾಣ ಪ್ರಕ್ರಿಯೆಗಳಲ್ಲಿ, ತಮಗೆ ಮತ್ತು ಸರ್ಕಾರಕ್ಕೆ ಅಗತ್ಯವಿದ್ದಲ್ಲಿ, ಸಲಹೆಗಳನ್ನು ನೀಡಲು ನಾನು ಸಿದ್ದನಿದ್ದೇನೆ. ನಗರ ಮತ್ತು ನಾಗರಿಕರು ಎದುರಿಸುತ್ತಿರುವ ಪ್ರಸಕ್ತ ಬಿಕ್ಕಟ್ಟಿಗೆ ತಾವು ತಕ್ಷಣವೇ ಸೂಕ್ತ ಕ್ರಮಗಳನ್ನು ಕೈಗೊಳ್ಳುವಿರೆಂದು ನಿರೀಕ್ಷಿಸುತ್ತಿದ್ದೇನೆ.

ತಮ್ಮ ಪ್ರತಿಕ್ರಿಯೆಯನ್ನು ಎದುರು ನೋಡುತ್ತಿದ್ದೇನೆ.

ತಮ್ಮ ವಿಶ್ವಾಸಿ

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ದರಾಮಯ್ಯನವರು**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ, ವಿಧಾನಸೌಧ
ಬೆಂಗಳೂರು

ಪ್ರತಿಯನ್ನು:- ಮಾನ್ಯ ಶ್ರೀ ರಾಮಲಿಂಗಾರೆಡ್ಡಿ, ಸಾರಿಗೆ ಸಚಿವರು ಮತ್ತು ಬೆಂಗಳೂರು ನಗರ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು